ಹದ ತಪ್ಪಿದರೂ ಇವು ನಂಬಿಕೆ, ಮೂಢನಂಬಿಕೆಯ ಅಂಚಿಗೆ ಬಂದು ನಿಂತುಬಿಡುತ್ತವೆ. ಹೀಗಾಗಿ ಘನತೆಯನ್ನು ಕಳೆಯದ, ತೆಳುವಾಗದ ಕಥನಗಳಾದಾಗ ಮಾತ್ರ ನಮ್ಮ ಗಮನ ಸೆಳೆಯುತ್ತವೆ.

ಲೋಕೇಶ ಅಗಸನಕಟ್ಟೆಯವರ 'ಅತೀತ ಲೋಕದ ಮಹಾಯಾತ್ರಿಕ' ಆತ್ಮಚರಿತ್ರಾತ್ಮಕ ಕಾದಂಬರಿ ಈ ದಾರಿಯಲ್ಲಿ ಸಾಗಿದೆ. ಮಾಂತ್ರಿಕವಾಸ್ತವತೆಯ ತಾತ್ವಿಕತೆಯನ್ನು ಹೊಂದಿರುವ ಈ ಕಾದಂಬರಿ ನಮ್ಮಲ್ಲಿ ಆಸಕ್ತಿ ಹುಟ್ಟಿಸಲು ಹಲವು ಕಾರಣಗಳಿವೆ. ಅಧ್ಯಾತ್ಮ ಈ ನಮ್ಮ ಕಾಲದ ಆರ್ತ ಹುಡುಕಾಟಗಳಲ್ಲೊಂದು. ಅದು ಅನಿವಾರ್ಯವೂ ಆಗಿಬಿಟ್ಟಿದೆ ಎನ್ನುವುದು ನಿಜವೇ. ಈ ಆರ್ತವಾದ ಹುಡುಕಾಟದ ಒಂದು ಪ್ರಯತ್ನವಾಗಿ ಈ ಕಾದಂಬರಿಯಿದೆ. ಹಾಗೆಯೇ, ಕನ್ನಡದ ಅನುಭಾವ ಪರಂಪರೆಯ ಗ್ರಹಿಕೆಯ ಒಂದು ಮಾದರಿಯನ್ನೂ ಈ ಕಾದಂಬರಿ ಕಟ್ಟಿಕೊಡುತ್ತಿದೆ. ಅಥವಾ ಈ ಬಗೆಯ ಪ್ರಯತ್ನಗಳ ಜೊತೆ ಈ ಕಾದಂಬರಿ ನಡೆಸುತ್ತಿರುವ ಮಾತುಕತೆಯನ್ನೂ ಗಮನಿಸಲು ಅವಕಾಶವಿದೆ. ಕೊನೆಯದಾಗಿ ಈಗಾಗಲೇ ನಮ್ಮನ್ನು ಆಳುತ್ತಿರುವ ಸಮಕಾಲೀನ 'ದೇವಮಾನವರ' ಎದುರಿಗೆ ಈ ಬಿಂದುಮಾಧವ ಹೇಗೆ ಕಾಣಿಸುತ್ತಾನೆ ಎನ್ನುವುದನ್ನು ಗಮನಿಸಲೂ ಈ ಕಾದಂಬರಿ ಒಂದು ವೇದಿಕೆಯನ್ನು ಸೃಷ್ಟಿಸುತ್ತದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿಯೇ ಈ ಕಾದಂಬರಿಯನ್ನು ಗಮನಿಸಬೇಕು. ಏಕೆಂದರೆ, ಕಾವ್ಯದಲ್ಲಿದು ಸಾಚಾ ಇದು ಮೋಸ ಎಂದು ಹೇಳುವುದು ಬಡಪಾಯಿ ಕವಿಗೆಲ್ಲ ಸುಲಭವಲ್ಲ. ಹಾಗೆಯೇ ಅತೀತಲೋಕದ ವ್ಯಕ್ತಿತ್ವಗಳ ಸಾಚಾತನವನ್ನು ಮನದಟ್ಟು ಮಾಡಿಸುವುದೂ ಬಲು ಕಷ್ಟದ ಕೆಲಸ. ಲೋಕೇಶ ಅವರು ಈ ಸವಾಲನ್ನು ದಿಟ್ಟತನದಿಂದಲೇ ಎದುರಿಸಿದ್ದಾರೆ ಎನ್ನಬೇಕು. ಈ ಕೃತಿರಚನೆಗೆ ಬೇಕಾದ ತಯಾರಿಯನ್ನೂ ಇವರು ಇದರ ಹಿಂದಿನ ಕೃತಿಯಲ್ಲೇ ಮಾಡಿದ್ದಾರೆ. ಅಥವಾ ಆ ಕೃತಿಯನ್ನು ಈ ಪ್ರಸ್ತುತ ಕೃತಿಯ ರಿಹರ್ಸಲ್ ಅಂತಲೂ ಕರೆಯಬಹುದೋ ಏನೋ.

ಲೌಕಿಕ ಮತ್ತು ಅಲೌಕಿಕಗಳ ನಡುವೆ ಓಡಾಡುವ ವ್ಯಕ್ತಿತ್ವವನ್ನು ಎರಡೂ ಲೋಕದವರಾಗಿ 'ಕಾಣಿಸಬೇಕಾದ' ಸಂಗತಿಯನ್ನು ಲೋಕೇಶ ಎದುರಿಸುವುದು ನಂಬಿಕೆಯ ಹಿನ್ನೆಲೆಯಲ್ಲಿಯೇ ಆದರೂ 'ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ... ಕವಿಗಳ್ ಕೃತಿಬಂಧದೊಳಲ್ತೆ ಸಾಧಿಸಿದರ್' ಎನ್ನುವ ಕವಿಯ ಪ್ರತಿಭೆಯನ್ನೂ ಕಾವ್ಯದ ಶಕ್ತಿ ಮತ್ತು ಸಾಧ್ಯತೆಯನ್ನೂ ಬಳಸಿಕೊಂಡಿದ್ದಾರೆ.

ಕಾದಂಬರಿಯ ನಾಯಕ ಬಿಂದುಮಾಧವ. ಮರ್ತ್ಯ, ಅಮರ್ತ್ಯಗಳೆರಡನ್ನೂ ಆವರಿಸಿ ಬೆಳೆದು ನಿಂತ ವ್ಯಕ್ತಿತ್ವ. ಆದರೆ ಈ ಬಿಂದುಮಾಧವ ನಮಗೆ ಯಾಕೆ ಆಪ್ತನಾಗುತ್ತಾನೆ ಎಂದರೆ, ನಾವು, ಅಂದರೆ ಹುಲುಮಾನವರು ಉದ್ದಕ್ಕೂ ಕನಸುವ ಒಂದು ವ್ಯಕ್ತಿತ್ವ ಇದೆಯಲ್ಲ, ನಮ್ಮ ಕಷ್ಟ ಸುಖಗಳಿಗೆ




ಅತೀತ ಲೋಕದ ಮಹಾಯಾತ್ರಿಕ
ಲೇ: ಲೋಕೇಶ ಅಗಸನಕಟ್ಟೆ
ಪು: 208 ಬೆಲೆ: ₹ 150
ಪ್ರ: ವೀರಪ್ರತಾಪ ಮೀಡಿಯಾ ಟ್ರಸ್ಟ್,
ಬೆಲಗೂರು–577 597